*

**ಓಎಸ್ ನಂ: 37/2018**

**ಡಿಡಬ್ಲೂ: 1**

**<u>ಸಾಕ್ಷಿ ಗೆ ದಿನಾಂಕ 31-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಂದುವರಿದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ. ಪಿ.ಎಸ್.ಕೆ. ವಕೀಲರಿಂದ</u>**

ವಾದಿಯು ಪ್ರತಿವಾದಿಗೆ ಕಳಹಿಸಿದ ಲೀಗಲ್ ನೋಟೀಸ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು, ಸದರಿ ನೋಟೀಸ್ ಗೆ ನೀಡಿದ ಉತ್ತರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು, ಸದರಿ ಉತ್ತರದ ನೋಟೀಸ್ ಗೆ ವಾದಿಯು ಹಿಂತಿರುಗಿ ನೀಡಿದ ಉತ್ತರದ ನೋಟೀಸ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-3 ಎಂದು, ಸದರಿ ಉತ್ತರದ ನೋಟೀಸ್ ಗೆ ಪ್ರತಿವಾದಿ ಹಿಂತಿರುಗಿ ನೀಡಿದ ನೋಟೀಸ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-4 ಎಂದು, ವಾದಿ ಮತ್ತು ಪ್ರತಿವಾದಿಯರ ಮದುವೆಯ ಆಮಂತ್ರಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-5 ಎಂದು, ಸದರಿ ಆಮಂತ್ರಣ ಪತ್ರದ ತರ್ಜುಮೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-5ಎ ಎಂದು, ವಾದಿ ಮತ್ತು ಪ್ರತಿವಾದಿಯ ಮದುವೆಯ ಸರ್ಟಿಫಿಕೇಟ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-6 ಎಂದು, ಮೂಲ ದಾವೆ ನಂಬರ್ 11/2018ರ ಅಂತಿಮ ನಿರ್ಧಾರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-7 ಎಂದು, ಸದರಿ ಅಂತಿಮ ನಿರ್ಧಾರದ ಡಿಕ್ರಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-8 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.